# ಕರ್ನಾಟಕ ವಿಧಾನ ಪರಿಷತ್ತು

## ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಅಡಗೂರು ಹೆಚ್ ವಿಶ್ವನಾಥ್, ಇವರು ನಿಯಮ 72 ರಡಿ ನೀಡಿರುವ ಗಮನ ಸೆಳೆಯುವ ಸೂಚನೆ ಬಗ್ಗೆ

**ವಿಷಯ**:

ಸಾರ್ವಜನಿಕ ಗ್ರಂಥಾಲಯ ಇಲಾಖೆಯಲ್ಲಿ ನೋಂದಣಿಯಾದ 2022-2023-2024ನೇ ಸಾಲಿನ ಪುಸ್ತಕ ಆಯ್ಕೆಗೆ ಸಂಬಂಧಪಟ್ಟಂತ ಅಂತಿಮ ಆಯ್ಕೆಯ ಪಟ್ಟಿ ಪ್ರಕ್ರಿಯೆ ಮತ್ತು ಇಲಾಖೆಯಲ್ಲಿನ ಪುಸ್ತಕ ಖರೀದಿಯ ವಿವಿಧ ಯೋಜನೆಗಳಾದ ಏಕಗವಾಕ್ಷಿ, ಆರ್ ಆರ್ ಎಲ್ ಎಫ್ ಮತ್ತು ಎಸ್ಸಿಪಿ, ಟಿಎಸ್‌ಪಿ ಯೋಜನೆಗಳ ಖರೀದಿಯ ಯೋಜನೆಗಳು ಯಾವ ಹಂತದಲ್ಲಿವೆ, ಸ್ಥಳೀಯ ಸಂಸ್ಥೆಗಳಿಂದ ಗ್ರಂಥಾಲಯ ಇಲಾಖೆಗೆ ಬರಬೇಕಾದ ಕರದ ವಸೂಲಾತಿ ಕ್ರಮಗಳು, ಇಲಾಖೆಯಲ್ಲಿ ಆಯುಕ್ತರ ಸೃಜನೆಯ ವಿಷಯಕ್ಕೆ ಸಂಬಂಧಿಸಿದಂತೆ ಅವರ ಅಧಿಕಾರದ ವ್ಯಾಪ್ತಿ, ಗ್ರಂಥಾಲಯ ಇಲಾಖೆಯ ಅಧೀನದಲ್ಲಿದ್ದ 5766 ಗ್ರಾಮ ಪಂಚಾಯತ್ ಗ್ರಂಥಾಲಯಗಳು ಪಂಚಾಯತ್ ರಾಜ್ ಇಲಾಖೆಗೆ ವರ್ಗಾವಣೆಗೊಂಡ ನಂತರ ಸಾರ್ವಜನಿಕ ಗ್ರಂಥಾಲಯ ಇಲಾಖೆಯಲ್ಲಿ ಖರೀದಿಸಿದ ಪುಸ್ತಕಗಳ ವಿಲೇವಾರಿಗೆ ತೆಗೆದುಕೊಂಡ ಕ್ರಮಗಳು, ಕಳೆದ ಹತ್ತು ವರ್ಷಗಳಿಂದ ಎಷ್ಟು ಹೊಸ ಗ್ರಂಥಾಲಯಗಳನ್ನು ಸ್ಥಾಪಿಸಲಾಗಿದೆ ಮತ್ತು ಪುಸ್ತಕ ಖರೀದಿಯ ಎಷ್ಟು ಪ್ರತಿಗಳನ್ನು ಹೆಚ್ಚಿಸಲಾಗಿದೆ.

2017ನೇ ಸಾಲಿನಿಂದ ಇಲ್ಲಿಯವರೆಗೆ ಪುಸ್ತಕಗಳ ಪುಟವಾರು ಬೆಲೆಏರಿಕೆ, ಪರಿಷ್ಕರಣೆಯಾಗಿಲ್ಲ ಮತ್ತು ವಿಶೇಷ ಅಳತೆಯ ಪುಸ್ತಕಗಳಿಗೆ ಪುಟವಾರು ಬೆಲೆ ನಿಗಧಿಯಾಗದಿರುವುದಕ್ಕೆ ಕಾರಣ ಹಾಗೂ ತಾವು ಸಾರ್ವಜನಿಕ ಇಲಾಖೆಯ ಮಂತ್ರಿಯಾದ ನಂತರ ಹಾಗೂ ಆಯುಕ್ತಾಲಯವನ್ನು ಸೃಜಿಸಿದ ನಂತರ ಪುಸ್ತಕಗಳ ಖರೀದಿಯಲ್ಲಿ ಹಾಗೂ ಆಡಳಿತದಲ್ಲಿ ಆದ ಅಭಿವೃದ್ಧಿ, ತಾಂತ್ರಿಕ ಸುಧಾರಣೆಗಳ ಬಗ್ಗೆ ಗಮನ ಸೆಳೆಯುತ್ತೇನೆ.

**ಉತ್ತರ**:

**ಪುಸ್ತಕ ಖರೀದಿ:** 2022ರಲ್ಲಿ ಮುದ್ರಣಗೊಂಡು ಇಲಾಖೆಯಲ್ಲಿ ನೋಂದಣಿಯಾದ ಪುಸ್ತಕಗಳನ್ನು ಡಾ.ಕರೀಗೌಡ ಬೀಚನಹಳ್ಳಿ ಅಧ್ಯಕ್ಷರು, ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಗೆ ಆಯ್ಕೆಗಾಗಿ ಮಂಡಿಸಲಾಗಿದ್ದು, ಆಯ್ಕೆ ಪ್ರಕ್ರಿಯೆಯು ಮುಕ್ತಾಯವಾಗಿರುತ್ತದೆ. ಪುಸ್ತಕಗಳ ತಾಂತ್ರಿಕ ಕಾರ್ಯಗಳಾದ ಪುಸ್ತಕಗಳ ಅಳತೆ, ಪ್ರಕಾರ ಮತ್ತು ಬೆಲೆ ನಿಗಧಿಪಡಿಸುವುದು ಅಂತಿಮ ಹಂತದಲ್ಲಿದ್ದು, ಪೂರ್ಣಗೊಂಡ ನಂತರ ಪುಸ್ತಕಗಳ ಆಯ್ಕೆಪ್ರಕ್ರಿಯೆ ಮಾರ್ಗಸೂಚಿಗಳನ್ವಯ ಕ್ರಮಕೈಗೊಂಡು ಅನುಮೋದನೆಗಾಗಿ ಸಾರ್ವಜನಿಕ ಗ್ರಂಥಾಲಯ ಇಲಾಖೆಯಿಂದ ಸರ್ಕಾರಕ್ಕೆ ಸಲ್ಲಿಸಲಾಗುತ್ತದೆ.

2022ರ ಆಯ್ಕೆ ಪಟ್ಟಿಯು ಸರ್ಕಾರದಿಂದ ಅನುಮೋದನೆಗೊಂಡ ನಂತರ 2023 ಮತ್ತು 2024 ರಲ್ಲಿ ಮುದ್ರಣಗೊಂಡು ನೋಂದಣಿಯಾದ ಪುಸ್ತಕಗಳನ್ನು ರಾಜ್ಯಮಟ್ಟದ ಪುಸ್ತಕ ಆಯ್ಕೆ ಸಮಿತಿಯಿಂದ ಆಯ್ಕೆಗಾಗಿ ಆಯ್ಕೆಸಮಿತಿಗೆ ಮಂಡಿಸಲಾಗುತ್ತದೆ.

ಸಾರ್ವಜನಿಕ ಗ್ರಂಥಾಲಯ ಇಲಾಖೆಯ **ವಿವಿಧ ಯೋಜನೆಗಳಾದ** - ಏಕಗವಾಕ್ಷಿ ಯೋಜನೆಯಡಿ ಪುಸ್ತಕ ಖರೀದಿ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ, ಎಸ್.ಸಿ.ಪಿ/ಟಿ.ಎಸ್.ಪಿ ಯೋಜನೆಯಡಿ ಕ್ರಿಯಾಯೋಜನೆ ಅನುಮೋದನೆಗೊಂಡಂತೆ 2022-23ನೇ ಸಾಲಿನಲ್ಲಿ 2022 ರ ಪ್ರಕಟಣೆಯ

ಪುಸ್ತಕಗಳನ್ನು ನಿಯಮಾನುಸಾರ ಖರೀದಿಸಲಾಗಿರುತ್ತದೆ. 2023 ಮತ್ತು 2024ನೇ ಸಾಲಿನ ಪ್ರಕಟಣೆಯ ಪುಸ್ತಕಗಳನ್ನು ಖರೀದಿಸಲಾಗಿರುವುದಿಲ್ಲ. ಆರ್.ಆರ್.ಆರ್.ಎಲ್.ಎಫ್.ಯೋಜನೆಗೆ ಸಂಬಂಧಿಸಿದಂತೆ ಹೊಂದಾಣಿಕೆ ಅನುದಾನ (Matching Grants) ಬಿಡುಗಡೆಗೊಂಡ ನಂತರ ಕ್ರಮ ಜರುಗಿಸಲಾಗುತ್ತದೆ.

**ಕರ ವಸೂಲಾತಿ:** ಗ್ರಂಥಾಲಯ ಕರವನ್ನು ಇ.ಸಿ.ಎಸ್ ಮೂಲಕ ಅಥವಾ ESCROW ಖಾತೆ ತೆರೆದು ಸದರಿ ಖಾತೆ ಮುಖಾಂತರ ಗ್ರಂಥಾಲಯ ಇಲಾಖೆಗೆ ಪಾವತಿಸಲು ಕ್ರಮಕೈಗೊಳ್ಳುವಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ನಿರ್ದೇಶಕರು, ಪೌರಾಡಳಿತ ಇಲಾಖೆ, ನಿರ್ದೇಶಕರು, ನಗರಾಭಿವೃದ್ಧಿ ಇಲಾಖೆ, ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, 30 ಜಿಲ್ಲೆಗಳ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ತಿಳಿಸಲಾಗಿದೆ.

ಏಕಕಡತ ಪದ್ಧತಿಯಲ್ಲಿ ಸಲ್ಲಿಸಲಾದ ಪ್ರಸ್ತಾವನೆಗೆ ಸಂಬಂಧಿಸಿದಂತೆ, 31-03-2017ರಅಂತ್ಯಕ್ಕೆ ನಗರ ಸ್ಥಳೀಯ ಸಂಸ್ಥೆಗಳಿಂದ ಬಾಕಿ ಇರುವ ಗ್ರಂಥಾಲಯ ಕರ ರೂ. 259.00 ಕೋಟಿಗಳನ್ನು ಕಂತಿನಲ್ಲಿ ವರ್ಗಾಯಿಸಲು ಮತ್ತು 01-04-2017 ರಿಂದ ಕಟಾಯಿಸಲಾಗುವ ಗ್ರಂಥಾಲಯ ಕರವನ್ನು ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ESCROW ಖಾತೆ ಮುಖಾಂತರ ಪಾವತಿಸಲು ಸೂಕ್ತ ಆದೇಶ ಹೊರಡಿಸುವಂತೆ ಮಾನ್ಯ ಮುಖ್ಯಮಂತ್ರಿಗಳು ಆರ್ಥಿಕ ಇಲಾಖೆಗೆ ಸೂಚಿಸಿರುತ್ತಾರೆ.

ಮಹಾನಗರ ಪಾಲಿಕೆ ಮತ್ತು ಸ್ಥಳೀಯ ಸಂಸ್ಥೆಗಳಿಂದ ಬಾಕಿ ಉಳಿಸಿಕೊಂಡಿರುವ ಗ್ರಂಥಾಲಯ ಕರಕ್ಕೆ ಸಂಬಂಧಿಸಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ರೂ.50.00 ಕೋಟಿಗಳನ್ನು ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ಬಿಡುಗಡೆ ಮಾಡಿರುತ್ತದೆ. ಬಾಕಿ ಇರುವ ಗ್ರಂಥಾಲಯ ಕರ ವಸೂಲಾತಿಗಾಗಿ ಕ್ರಮ ವಹಿಸಲಾಗಿರುತ್ತದೆ.

ಕರ್ನಾಟಕ ಸಾರ್ವಜನಿಕ ಗ್ರಂಥಾಲಯಗಳ ಕಾಯ್ದೆ 1965ರ ಕಲಂ 30(4)ರ ಉಪ ಕಲಂ 3 ರಲ್ಲಿ ಸಂಬಂಧಪಟ್ಟ ನಗರ ಸ್ಥಳೀಯ ಸಂಸ್ಥೆಗಳು ವಸೂಲು ಮಾಡಿರುವ ಗ್ರಂಥಾಲಯ ಕರದಲ್ಲಿ ಶೇಕಡಾ 10 ರಷ್ಟು ಸಂಗ್ರಹಣಾ ವೆಚ್ಚವನ್ನಾಗಿ ಉಳಿಸಿಕೊಂಡು ಇನ್ನುಳಿದ ಮೊತ್ತವನ್ನು ನಗರ ಅಥವಾ ಜಿಲ್ಲಾ ಗ್ರಂಥಾಲಯ ಪ್ರಾಧಿಕಾರಕ್ಕೆ ಪಾವತಿಸಬೇಕೆಂದು ನಮೂದಿಸಲಾಗಿದೆ. ಆದರೆ ಯಾವುದೇ ನಿರ್ದಿಷ್ಟ ಅವಧಿಯನ್ನು ನಿಗಧಿಪಡಿಸಿರುವುದಿಲ್ಲ.

ಈ ಸಂಬಂಧ ಆರ್ಥಿಕ ಇಲಾಖೆ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ ಹಾಗೂ ಕಾನೂನು ಇಲಾಖೆಯೊಂದಿಗೆ ಸಮಾಲೋಚಿಸಿ, ನಗರ ಸ್ಥಳೀಯ ಸಂಸ್ಥೆಗಳು ವಸೂಲು ಮಾಡಿರುವ ಗ್ರಂಥಾಲಯ ಕರದಲ್ಲಿ ಶೇಕಡಾ 5 ರಷ್ಟು ಸಂಗ್ರಹಣಾ ವೆಚ್ಚವನ್ನಾಗಿ ಉಳಿಸಿಕೊಂಡು, ಉಳಿದ ಮೊತ್ತವನ್ನು 30 ದಿನಗಳೊಳಗಾಗಿ ಸಂಬಂಧಪಟ್ಟ ಪ್ರಾಧಿಕಾರಕ್ಕೆ ಪಾವತಿಸುವಂತೆ ಕರ್ನಾಟಕ ಗ್ರಂಥಾಲಯ ಇಲಾಖೆಯ ಕಾಯ್ದೆ1965 ಕಲಂ 30ಕ್ಕೆ ತಿದ್ದುಪಡಿ ಉಪಬಂಧ ಕಲ್ಪಿಸುವ ಸಂಬಂಧ ಪರಿಶೀಲಿಸಲಾಗುತ್ತಿದೆ.

ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು/ಮುಖ್ಯ ಕಾರ್ಯನಿರ್ವಾಕರುಗಳಿಗೆ ಬಾಕಿ ಇರುವ ಗ್ರಂಥಾಲಯಕರ ಪಾವತಿಸಲು ಸಂಬಂಧಿಸಿದ ಸ್ಥಳೀಯ ಸಂಸ್ಥೆಗಳ ಮುಖ್ಯಸ್ಥರಿಗೆ ಸೂಕ್ತ ನಿರ್ದೇಶನ ನೀಡುವಂತೆ ಸಾರ್ವಜನಿಕ ಗ್ರಂಥಾಲಯ ಇಲಾಖೆಯಿಂದ ಪತ್ರ ಹೊರಡಿಸಲಾಗಿದೆ.

**ಆಯುಕ್ತರ ಹುದ್ದೆಯ ಸೃಜನೆ**: ಕರ್ನಾಟಕ ಸಾರ್ವಜನಿಕ ಗ್ರಂಥಾಲಯ ಕಾಯ್ದೆ 1965 ರನ್ವಯ ರಾಜ್ಯದಲ್ಲಿ ಸಮಗ್ರವಾಗಿ ಸಾರ್ವಜನಿಕ ಗ್ರಂಥಾಲಯ ವ್ಯವಸ್ಥೆಯನ್ನು ಕಾರ್ಯರೂಪಕ್ಕೆ ತರಲಾಗಿದೆ. ರಾಜ್ಯಮಟ್ಟದಲ್ಲಿ ರಾಜ್ಯಕೇಂದ್ರ ಗ್ರಂಥಾಲಯ, ಒಂದು ಲಕ್ಷ ಜನಸಂಖ್ಯೆಗಿಂತ ಹೆಚ್ಚಿನ ಜನಸಂಖ್ಯೆ ಹೊಂದಿದ ಪ್ರತಿಯೊಂದು ನಗರದಲ್ಲಿ ನಗರಕೇಂದ್ರ ಗ್ರಂಥಾಲಯ ಹಾಗೂ ಶಾಖಾಗ್ರಂಥಾಲಯಗಳು, ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಕೇಂದ್ರಗ್ರಂಥಾಲಯ, ತಾಲ್ಲೂಕು ಕೇಂದ್ರ, ಪುರಸಭೆ ಮತ್ತು ಅಲೆಮಾರಿ ಮತ್ತು ಕೊಳಚೆ ಪ್ರದೇಶಸ್ಥಳಗಳಲ್ಲಿ ಅಲೆಮಾರಿ ಹಾಗೂ ಕೊಳಚೆ ಪ್ರದೇಶ ಗ್ರಂಥಾಲಯಗಳು ಹಾಗೂ ಮಕ್ಕಳಿಗಾಗಿ ಸಮುದಾಯ, ಮಕ್ಕಳ ಗ್ರಂಥಾಲಯಗಳು, ಕಾರ್ಯನಿರತವಾಗಿವೆ.

ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಕಾರ್ಯವ್ಯಾಪ್ತಿಯು ದಿನದಿಂದ ದಿನಕ್ಕೆ ವಿಸ್ತಾರವಾಗುತ್ತಿದ್ದು, ಪ್ರಸ್ತುತ ಇರುವ ನಿರ್ದೇಶಕರ ಹಂತದ ಹುದ್ದೆಯು ತಾಂತ್ರಿಕ ಸ್ವರೂಪದ ಹುದ್ದೆಯಾಗಿರುವ ಹಿನ್ನೆಲೆಯಲ್ಲಿ ಸದರಿ ಇಲಾಖೆಯ ಕಾರ್ಯಚಟುವಟಿಕೆಗಳ ಗುಣಮಟ್ಟ ಹೆಚ್ಚಿಸುವ ಸಲುವಾಗಿ ಹಾಗೂ ಇಲಾಖೆ ಮತ್ತು ಸರ್ಕಾರದ ಹಂತದಲ್ಲಿ ಸಮನ್ವಯ ಸಾಧಿಸಿ, ಆಡಳಿತದಲ್ಲಿ ಪಾರದರ್ಶಕತೆ ಮತ್ತು ಕಾರ್ಯಕ್ಷಮತೆ ವೃದ್ಧಿಸುವ, ಆಡಳಿತಾತ್ಮಕ ಪ್ರಕಾರ್ಯಗಳನ್ನು ಸುಗಮವಾಗಿ ನಿರ್ವಹಿಸುವ ಮತ್ತು ಸರ್ಕಾರದ ಯೋಜನೆಗಳನ್ನು ನಿಗದಿತ ಕಾಲಮಿತಿಯಲ್ಲಿ ಅನುಷ್ಠಾನಗೊಳಿಸುವ ಹಿತದೃಷ್ಟಿಯಿಂದ ನಿರ್ದೇಶಕರ ಹುದ್ದೆಯ ಮೇಲಿನ ಹಂತದಲ್ಲಿ ಭಾರತೀಯ ಆಡಳಿತ ಸೇವೆ ವೃಂದದ ಸೂಪರ್ ಟೈಮ್ ಸ್ಕೇಲ್/ ಆಯ್ಕೆ ಶ್ರೇಣಿಗಿಂತ ಕಡಿಮೆ ಇಲ್ಲದ ಭಾ.ಆ.ಸೇ ದರ್ಜೆಯ ಆಯಕ್ತರ ಹುದ್ದೆಯನ್ನು ಸೃಜಿಸಲಾಗಿರುತ್ತದೆ.

ಸಾರ್ವಜನಿಕ ಗ್ರಂಥಾಲಯ ಇಲಾಖೆಯ ವಿವಿಧ ಯೋಜನೆಗಳಡಿಯಲ್ಲಿ 2020-21 ನೇ ಸಾಲಿನಿಂದ 2023-24 ವರೆಗೆ ಸುಮಾರು 28,30,020 ಪುಸ್ತಕಗಳನ್ನು ಖರೀದಿಸಲಾಗಿರುತ್ತದೆ. ಸದರಿ ಪುಸ್ತಕಗಳಿಗೆ ತಾಂತ್ರಿಕ ಕಾರ್ಯ ನಿರ್ವಹಿಸಿ, ಸರ್ಕಾರಿ ಸಂಸ್ಥೆಯಾದ KSRTC Cargo Transport ವತಿಯಿಂದ ಎಲ್ಲಾ ಜಿಲ್ಲಾ ಕೇಂದ್ರ ಗ್ರಂಥಾಲಯಗಳಿಗೆ ಈವರೆಗೂ ರೂ.27,86,813/-ಗಳ ವೆಚ್ಚದಲ್ಲಿ 15,92,381 ಪುಸ್ತಕಗಳನ್ನು ಸಾಗಾಣಿಕೆ ಮಾಡಲಾಗಿರುತ್ತದೆ. ಉಳಿದಂತೆ 12,37,639 ಪುಸ್ತಕಗಳನ್ನು ಹಂತಹಂತವಾಗಿ ಎಲ್ಲಾ ಜಿಲ್ಲಾ ಕೇಂದ್ರ ಗ್ರಂಥಾಲಯಗಳಿಗೆ ಸಾಗಾಣಿಕೆ ಮಾಡುವ ಕಾರ್ಯವು ಪ್ರಗತಿಯಲ್ಲಿರುತ್ತದೆ.

ಕಳೆದ 10 ವರ್ಷಗಳಲ್ಲಿ 98 **ಹೊಸ ಗ್ರಂಥಾಲಯ**ಗಳನ್ನು ಸ್ಥಾಪಿಸಲಾಗಿದೆ. ಗ್ರಂಥಾಲಯಗಳ ಅವಶ್ಯಕತೆಗೆ ಅನುಗುಣವಾಗಿ ಪುಸ್ತಕಗಳ ಪ್ರತಿಗಳನ್ನು ಖರೀದಿಸಲಾಗುತ್ತಿದೆ.

**ಪುಸ್ತಕಗಳ ಬೆಲೆ ಹೆಚ್ಚಳ**: ಸಾರ್ವಜನಿಕ ಗ್ರಂಥಾಲಯ ಇಲಾಖೆಯಿಂದ ಖರೀದಿಸುವ ಪುಸ್ತಕಗಳಿಗೆ ಪ್ರತಿ ಪುಟಕ್ಕೆ 30 ಪೈಸೆಯನ್ನು ಹೆಚ್ಚಿಸುವ ಕುರಿತಾದ ಪ್ರಸ್ತಾವನೆಗೆ ಆರ್ಥಿಕ ಇಲಾಖೆಯು ಸಹಮತಿ ನೀಡಿರುವುದಿಲ್ಲ.

ಮುಂದುವರೆದು, ಸಾರ್ವಜನಿಕ ಗ್ರಂಥಾಲಯ ಇಲಾಖೆಯಿಂದ ಖರೀದಿಸುವ ಪುಸ್ತಕಗಳಿಗೆ ಪ್ರತಿ ಪುಟಕ್ಕೆ 50 ಪೈಸೆಯನ್ನು ಹೆಚ್ಚಿಸುವಂತೆ ಕೋರಿ ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘ (ರಿ.) ಬೆಂಗಳೂರು ರವರ ಇವರು ಸಲ್ಲಿಸಿದ್ದ ಮನವಿಯ ಹಿನ್ನೆಯಲ್ಲಿ ದಿನಾಂಕ: 05-07-2025 ರಂದು ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಇಲಾಖೆಯ ಕಂದಾಯ ವಿಭಾಗಗಳ ಹಿರಿಯ ಅಧಿಕಾರಿಗಳ ಸಭೆಯಲ್ಲಿ ಕೈಗೊಂಡ ನಿರ್ಣಯದಂತೆ ಪುಟವಾರು ಬೆಲೆ ಹೆಚ್ಚಿಸುವ ಮತ್ತು ವಿಶೇಷ ಅಳತೆಯ ಪುಸ್ತಕಗಳಿಗೆ ಬೆಲೆ ನಿಗದಿಪಡಿಸುವ ಕುರಿತು ಸಾರ್ವಜನಿಕ ಗ್ರಂಥಾಲಯ ಇಲಾಖೆಯಿಂದ ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆಯ ಅಭಿಪ್ರಾಯ ಕೋರಲಾಗಿರುತ್ತದೆ.

ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯಿಂದ ಆಯ್ಕೆಯಾದ ಪುಸ್ತಕಗಳನ್ನು ರಾಜ್ಯದ ಎಲ್ಲಾ ಜಿಲ್ಲಾ/ನಗರ ಕೇಂದ್ರ ಗ್ರಂಥಾಲಯಗಳಿಂದ ಖರೀದಿಸಲು ಕ್ರಮ ವಹಿಸಲಾಗುತ್ತಿದೆ ಹಾಗೂ ಪುಸ್ತಕಗಳ ಆಯ್ಕೆ ಮತ್ತು ಖರೀದಿ ವಿಧಾನಗಳು ಮಾರ್ಗಸೂಚಿಗಳನ್ನು ಪರಿಷ್ಕರಿಸುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ಆಯುಕ್ತರ ಹುದ್ದೆಯನ್ನು ಸೃಜನೆ ಮಾಡಿದ ನಂತರ, ಆಡಳಿತದಲ್ಲಿ ಪಾರದರ್ಶಕತೆಯು ಹೆಚ್ಚಾಗಿದ್ದು, ಸಾರ್ವಜನಿಕ ಸೇವೆಯನ್ನು ಪರಿಣಾಮಕಾರಿಯಾಗಿ ನೀಡುವಲ್ಲಿ ಇಲಾಖೆಯು ಶ್ರಮಿಸುತ್ತಿದೆ. ಮುಂದುವರೆದು, ಇಲಾಖೆಗೆ ಹಿಂದಿನ ಬಾಕಿ ಸೇರಿದಂತೆ 2024-25ನೇ ಸಾಲಿನಲ್ಲಿ ಒಟ್ಟು ಗ್ರಂಥಾಲಯ ಕರ ರೂ. 300.60 ಕೋಟಿ ವಸೂಲಾಗಿದ್ದು, ರೂ.526.80 ಕೋಟಿ ಬಾಕಿ ಇರುತ್ತದೆ. ಇ-ಗ್ರಂಥಾಲಯಗಳನ್ನು ಹಂತ ಹಂತವಾಗಿ ರಾಜ್ಯಾದ್ಯಂತ ಎಲ್ಲಾ ಗ್ರಂಥಾಲಯಗಳಲ್ಲಿ ಅನುಷ್ಠಾನಗೊಳಿಸಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುತ್ತಿದೆ. ನಗರ ಕೇಂದ್ರ ಗ್ರಂಥಾಲಯ, ಉತ್ತರ ವಲಯ ವ್ಯಾಪ್ತಿಯ ವಿದ್ಯಾರಣ್ಯಪುರ ಹಾಗೂ ನಗರ ಕೇಂದ್ರ ಗ್ರಂಥಲಯ ದಕ್ಷಿಣ ವ್ಯಾಪ್ತಿಯ ಬಿ.ಟಿ.ಎಂ.ಲೇಔಟ್ 4ನೇ ಹಂತ ಸಿ.ಎ ನಿವೇಶನದಲ್ಲಿ ಸ್ಪರ್ಧಾತ್ಮಕ ಅಧ್ಯಯನ ಕೇಂದ್ರ ಗ್ರಂಥಾಲಯ ಕಟ್ಟಡ ನಿರ್ಮಾಣ ಮಾಡಲು ಯೋಜನೆಯನ್ನು ರೂಪಿಸಲಾಗಿದೆ.

**ಸಂಖ್ಯೆ: ಇಪಿ/ 103 /ಎಲ್‌ಐಬಿ /2025**

**(ಎಸ್. ಮಧು ಬಂಗಾರಪ್ಪ)**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು